ಬಡಪಾಯಿ ಸ್ವಾಲೋ ಹಕ್ಕಿಯ ದೇಹ ಭರ್ಪದಂತೆ ತಣ್ಣಗಾಯಿತು. ಆದರೂ ಅದು ರಾಜಕುಮಾರನನ್ನು ತೊರೆಯಲಿಲ್ಲ. ಅದೀಗ ರಾಜಕುಮಾರನನ್ನು ಅತಿಯಾಗಿ ಪ್ರೀತಿಸುತ್ತಿತ್ತು. ಒಮ್ಮೆ ಬ್ರೆಡ್ಡು ತಯಾರಿಸುವ ಫ್ಯಾಕ್ಟರಿಯ ಕುಲುಮೆಯಿಂದ ಬೆಂಕಿಯ ಕೊಳ್ಳೆಯನ್ನು ಹಕ್ಕಿ ತಂದು ಅದು ತನ್ನ ಮೈಕಾಸಿಕೊಂಡಿತು.

ಕೊನೆಗೆ ಈ ಹೆಪ್ಪುಗಟ್ಟಿಸುವ ಚಳಿಯಿಂದ ತಾನು ಸಾಯುವುದು ಖಚಿತ ಎಂದು ಅದಕ್ಕೆ ಮನವರಿಕೆಯಾಯಿತು. ಇನ್ನೊಮ್ಮೆ ರಾಜಕುಮಾರನ ಹೆಗಲವರೆಗೆ ಹಾರುವಷ್ಟು ಮಾತ್ರ ಶಕ್ತಿ ಅದರ ದೇಹದೊಳಗೆ ಉಳಿದುಕೊಂಡಿತ್ತು. ಕಷ್ಟಪಟ್ಟು ಮೇಲೆ ಹಾರಿ ಆತನ ಹೆಗಲ ಮೇಲೆ ಕುಳಿತು ನಡುಗುವ ದನಿಯಲ್ಲಿ, 'ಗುಡ್‌ಬಾಯ್ ಪ್ರಿನ್ಸ್, ನಾನು ನಿನ್ನ ಕೈಯನ್ನು ಚುಂಬಿಸಲೆ?' ಎಂದು ಕೇಳಿತು.

'ನನ್ನ ಪುಟ್ಟ ಸ್ವಾಲೋ, ಕೊನೆಗೂ ನೀನು ಇಜಿಪ್ಟಿಗೆ ಹೊರಟೆಯಲ್ಲ! ನನಗೀಗ ತುಂಬ ಖುಷಿಯಾಯಿತು. ನೀನು ಇಲ್ಲಿದ್ದು ಬಹಳ ಕಾಲವಾಯಿತು. ಚುಂಬಿಸುವುದಾದರೆ ನೀನು ನನ್ನ ತುಟಿಗಳನ್ನು ಚುಂಬಿಸು. ಏಕೆಂದರೆ, ನಾನು ನಿನ್ನನ್ನು ತುಂಬಾ ಪ್ರೀತಿಸುವೆ' ಎಂದು ರಾಜಕುಮಾರ ಹೇಳಿದ.

'ನಾನು ಇಜಿಪ್ಟಿಗೆ ಹೋಗುತ್ತಿಲ್ಲ. ನಾನೀಗ ಸಾವಿನ ಮನೆಗೆ ಹೊರಟಿರುವೆ. ಸಾವು ನಿದ್ರೆಯ ಸೋದರ ತಾನೆ?' ಎಂದು ಹೇಳಿ ಸ್ವಾಲೋ ಸುಖಿ ರಾಜಕುಮಾರನ ತುಟಿಗಳನ್ನು ಚುಂಬಿಸಿತು. ನಂತರ ಅದು ಆತನ ಪಾದದ ಬಳಿ ಕೆಳಗೆ ಬಿದ್ದು ಸತ್ತು ಹೋಯಿತು.

ಆ ಕ್ಷಣವೇ ಪ್ರತಿಮೆಯ ಒಳಗಿಂದ ಏನೋ ಒಡೆದು ಹೋದಂಥ ಭೀಕರ ಸದ್ದು ಕೇಳಿಸಿತು. ನಿಜಕ್ಕೂ ಆ ಪ್ರತಿಮೆಯ ಉಕ್ಕಿನ ಹೃದಯ ಇಬ್ಭಾಗವಾಗಿ ಸೀಳಿಹೋಗಿತ್ತು. ಖಂಡಿತವಾಗಿಯೂ ಅದೊಂದು ಭಯಾನಕ ಚಳಿಗಾಲವಾಗಿತ್ತು.

ಮರುದಿನ ಮುಂಜಾನೆ ನಗರಸಭೆ ಸದಸ್ಯರ ಜೊತೆಗೂಡಿ ಆ ನಗರದ ಮೇಯರ್ ನಡುಚೌಕಿಯ ದಾರಿ ಹಿಡಿದು ನಡೆದಿದ್ದ. ಅಲ್ಲಿದ್ದ ಸ್ತಂಭವನ್ನು ದಾಟುತ್ತಿದ್ದಂತೆ ಆತ ಮುಖವೆತ್ತಿ ಆ ಪ್ರತಿಮೆಯನ್ನು ನೋಡಿದ. 'ಅರೆ ಏನಿದು? ಸುಖಿ ರಾಜಕುಮಾರ ಎಷ್ಟೊಂದು ಭಗ್ನಗೊಂಡಿದ್ದಾನೆ!'

'ಹೌದಲ್ಲ, ಅದೆಷ್ಟು ಭಗ್ನಗೊಂಡಿದ್ದಾನೆ!' ಎಂದು ಜೊತೆಗಿದ್ದ ಸದಸ್ಯರು ಉದ್ಗರಿಸಿದರು. ಯಾವಾಗಲೂ ಮೇಯರ್ ಹೇಳಿದ್ದಕ್ಕೆಲ್ಲ ಅವರು ದನಿಗೂಡಿಸುತ್ತಿದ್ದರು. ನಂತರ ಪ್ರತಿಮೆಯನ್ನು ನೋಡಲೆಂದು ಅವರು ಸ್ತಂಭದ ಕಟ್ಟೆ ಏರಿದರು. 'ಆತನ ಖಡ್ಗದ ಮಾಣಿಕ್ಯ ಬಿದ್ದು ಹೋಗಿದೆ. ಆತನ ಕಣ್ಣುಗಳೂ ಕಾಣೆಯಾಗಿವೆ, ದೇಹದ ಬಂಗಾರವೂ ಮಾಯವಾಗಿದೆ. ಆತ ಭಿಕ್ಷುಕನಂತೆ ಕಾಣುತ್ತಿದ್ದಾನೆ' ಎಂದು ಮೇಯರ ಹೇಳಿದ.

'ಹೌದು, ಭಿಕ್ಷುಕನಂತೆ ತೋರುತ್ತಿದ್ದಾನೆ' ಎಂದು ಎಲ್ಲ ಸದಸ್ಯರೂ ಮತ್ತೆ ದನಿಗೂಡಿಸಿದರು.

'ಆತನ ಪಾದದ ಬಳಿ ಹಕ್ಕಿಯೊಂದು ಸತ್ತು ಬಿದ್ದಿದೆ!' ಮೇಯರ್ ಮಾತು ಮುಂದುವರೆಸಿದ. 'ಹಕ್ಕಿಗಳಿಗೆ ಸಾಯಲು ಇಲ್ಲಿ ಅವಕಾಶ ನೀಡಬಾರದು. ಹಾಗೆಂದು ಒಂದು ಪ್ರಕಟಣೆ ಹೊರಡಿಸಬೇಕು' ಆತನ ಸೂಚನೆಯನ್ನು ನಗರಸಭೆಯ ಕಾರಕೂನ ಬರೆದುಕೊಂಡ.

ನಂತರ ಅವರು ಸುಖಿ ರಾಜಕುಮಾರನ ಪ್ರತಿಮೆಯನ್ನು ಕಿತ್ತು ಕೆಳಗಿಳಿಸಿದರು. 'ಇದೀಗ ಆತ ಕುರೂಪಿಯಾಗಿದ್ದಾನೆ ಹಾಗೂ ನಿರುಪಯುಕ್ತನಾಗಿದ್ದಾನೆ' ಎಂದು ವಿಶ್ವವಿದ್ಯಾಲಯದ ಕಲಾ ಪ್ರಾಧ್ಯಾಪಕನೊಬ್ಬ ತನ್ನ ಶುಷ್ಕ ಅಭಿಪ್ರಾಯ ಮಂಡಿಸಿದ.